# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೀಜ ಹಾನಿ ನಿಧಿ ಕಾರ್ಯಕ್ರಮದಡಿ ಬೀಜ ಪೂರೈಕೆ ಸಮಿತಿ ರಚಿಸುವ ಬಗ್ಗೆ.

ಓದಲಾಗಿದೆ: 1. ಕೃಷಿ ಆಯುಕ್ತರ ಪ್ರಸ್ತಾವನೆ ಸಂಖ್ಯೆ: SFS-7/ಬಿ.ಹಾ.ನಿ/ಮಾರ್ಗಸೂಚಿ/2018-19, ದಿನಾಂಕ: 28.01.2019/11.02.2019.

**ಪ್ರಸ್ತಾವನೆ:**

ಮೇಲೆ ಓದಲಾದ (1) ರ ಕೃಷಿ ಆಯುಕ್ತರವರ ಪ್ರಸ್ತಾವನೆಯಲ್ಲಿ, ಸರ್ಕಾರಿ ಸೌಮ್ಯದ ಸಂಸ್ಥೆಗಳಾದ ಕರ್ನಾಟಕ ರಾಜ್ಯ ಬೀಜ ನಿಗಮ / ರಾಷ್ಟ್ರೀಯ ಬೀಜ ನಿಗಮ / ಕರ್ನಾಟಕ ಸಹಕಾರಿ ಬೀಜ ಬೆಳೆಗಾರರ ಮಹಾಮಂಡಳಿ ಹಾಗೂ ಕೃಷಿ ವಿಶ್ವವಿದ್ಯಾನಿಲಯ, ರಾಯಚೂರು ಮತ್ತು ಶಿವಮೊಗ್ಗ ಇವರುಗಳ ಕೋರಿಕೆಯಂತೆ ಬೀಜ ಹಾನಿ ನಿಧಿ ಯೋಜನೆಯಡಿ ರೈತ ಸಂಪರ್ಕ ಕೇಂದ್ರಗಳಲ್ಲಿ ವಿತರಣೆಯಾಗದೇ ಉಳಿಯುವ ಬಿತ್ತನೆ ಬೀಜ ಪ್ರಮಾಣವನ್ನು ಬೀಜೇತರ ಉದ್ದೇಶಕ್ಕೆ ವಿಲೇವಾರಿ ಮಾಡಿದ ದರ ಮತ್ತು ಬಿತ್ತನೆ ಬೀಜದ ವ್ಯತ್ಯಾಸದ ದರವನ್ನು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಪಾವತಿಸುವ ಸಲುವಾಗಿ ನಷ್ಟ ಭರಿಸಲು ಈ ಕೆಳಕಂಡಂತೆ ಬೀಜ ಪೂರೈಕೆ ಸಮಿತಿಯನ್ನು ರಚಿಸಿ, ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

| ಕ್ರ.ಸಂ. | ಸಂಸ್ಥೆಗಳ ಹೆಸರು | ಹುದ್ದೆ |
|---|---|---|
| 1 | ಕೃಷಿ ನಿರ್ದೇಶಕರು | ಅಧ್ಯಕ್ಷರು |
| 2 | ಅಪರ ಕೃಷಿ ನಿರ್ದೇಶಕರು (ಸಾವಯವ ಕೃಷಿ) | ಸದಸ್ಯರು |
| 3 | ನಿರ್ದೇಶಕರು, ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣನ ಸಂಸ್ಥೆ, ಬೆಂಗಳೂರು | ಸದಸ್ಯರು |
| 4 | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಬೀಜ ನಿಗಮ, ಬೆಂಗಳೂರು | ಸದಸ್ಯರು |
| 5 | ವ್ಯವಸ್ಥಾಪಕ ನಿರ್ದೇಶಕರು, ರಾಷ್ಟ್ರೀಯ ಬೀಜ ನಿಗಮ, ಬೆಂಗಳೂರು | ಸದಸ್ಯರು |
| 6 | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಹಕಾರಿ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳಿ ನಿಯಮಿತ, ಬೆಂಗಳೂರು | ಸದಸ್ಯರು |
| 7 | ವಿಶೇಷಾಧಿಕಾರಿಗಳು (ಬೀಜ) ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು / ಧಾರವಾಡ/ರಾಯಚೂರು | ಸದಸ್ಯರು |
| 8 | ವಿಶೇಷಾಧಿಕಾರಿಗಳು (ಬೀಜ) ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯ, ಶಿವಮೊಗ್ಗ | ಸದಸ್ಯರು |
| 9 | ಮುಖ್ಯ ಲೆಕ್ಕಾಧಿಕಾರಿಗಳು, ಕೃಷಿ ಆಯುಕ್ತರ ಕಾರ್ಯಾಲಯ, ಬೆಂಗಳೂರು | ಸದಸ್ಯರು |
| 10 | ಜಂಟಿ ಕೃಷಿ ನಿರ್ದೇಶಕರು (ಬೀಜಾಭಿವೃದ್ಧಿ ಮತ್ತು ರಾಜ್ಯ ಕ್ಷೇತ್ರ) ಕೃಷಿ ಆಯುಕ್ತರ ಕಾರ್ಯಾಲಯ, ಬೆಂಗಳೂರು | ಸದಸ್ಯರ ಕಾರ್ಯದರ್ಶಿ |

..2)

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 231 ಕೃಇಕ 2017, ಬೆಂಗಳೂರು, ದಿನಾಂಕ: 20-03-2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೀಜ ಹಾನಿ ನಿಧಿ ಕಾರ್ಯಕ್ರಮದಡಿ ರೈತ ಸಂಪರ್ಕ ಕೇಂದ್ರಗಳಲ್ಲಿ ವಿತರಣೆಯಾಗದೇ ಉಳಿಯುವ ಬಿತ್ತನೆ ಬೀಜ ಪ್ರಮಾಣವನ್ನು ಬೀಜೇತರ ಉದ್ದೇಶಕ್ಕೆ ವಿಲೇವಾರಿ ಮಾಡಿದ ದರ ಮತ್ತು ಬಿತ್ತನೆ ಬೀಜದ ವ್ಯತ್ಯಾಸದ ದರವನ್ನು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಹಾಗೂ ಕೃಷಿ ವಿಶ್ವವಿದ್ಯಾನಿಲಯಗಳಿಗೆ ಪಾವತಿಸುವ ಸಲುವಾಗಿ ನಷ್ಟ ಭರಿಸಲು ಬೀಜ ಪೂರೈಕೆ ಸಮಿತಿಯನ್ನು ಕೃಷಿ ನಿರ್ದೇಶಕರವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡಂತೆ ರಚಿಸಿ ಆದೇಶಿಸಲಾಗಿದೆ.

| ಕ್ರ.ಸಂ. | ಸಂಸ್ಥೆಗಳ ಹೆಸರು | ಹುದ್ದೆ |
|---|---|---|
| 1 | ಕೃಷಿ ನಿರ್ದೇಶಕರು | ಅಧ್ಯಕ್ಷರು |
| 2 | ಅಪರ ಕೃಷಿ ನಿರ್ದೇಶಕರು (ಸಾವಯವ ಕೃಷಿ) | ಸದಸ್ಯರು |
| 3 | ನಿರ್ದೇಶಕರು, ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣನ ಸಂಸ್ಥೆ, ಬೆಂಗಳೂರು | ಸದಸ್ಯರು |
| 4 | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಬೀಜ ನಿಗಮ, ಬೆಂಗಳೂರು | ಸದಸ್ಯರು |
| 5 | ವ್ಯವಸ್ಥಾಪಕ ನಿರ್ದೇಶಕರು, ರಾಷ್ಟ್ರೀಯ ಬೀಜ ನಿಗಮ, ಬೆಂಗಳೂರು | ಸದಸ್ಯರು |
| 6 | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಹಕಾರಿ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳಿ ನಿಯಮಿತ, ಬೆಂಗಳೂರು | ಸದಸ್ಯರು |
| 7 | ವಿಶೇಷಾಧಿಕಾರಿಗಳು (ಬೀಜ) ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು / ಧಾರವಾಡ/ರಾಯಚೂರು | ಸದಸ್ಯರು |
| 8 | ವಿಶೇಷಾಧಿಕಾರಿಗಳು (ಬೀಜ) ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯ, ಶಿವಮೊಗ್ಗ | ಸದಸ್ಯರು |
| 9 | ಮುಖ್ಯ ಲೆಕ್ಕಾಧಿಕಾರಿಗಳು, ಕೃಷಿ ಆಯುಕ್ತರ ಕಾರ್ಯಾಲಯ, ಬೆಂಗಳೂರು | ಸದಸ್ಯರು |
| 10 | ಜಂಟಿ ಕೃಷಿ ನಿರ್ದೇಶಕರು (ಬೀಜಾಭಿವೃದ್ಧಿ ಮತ್ತು ರಾಜ್ಯ ಕ್ಷೇತ್ರ) ಕೃಷಿ ಆಯುಕ್ತರ ಕಾರ್ಯಾಲಯ, ಬೆಂಗಳೂರು | ಸದಸ್ಯರ ಕಾರ್ಯದರ್ಶಿ |

**ಸಮಿತಿಯ ಕಾರ್ಯನಿರ್ವಹಣೆ / ಕರ್ತವ್ಯಗಳು:-**

1. ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣನ ಸಂಸ್ಥೆಯಿಂದ ಮರುಮೌಲ್ಯೀಕರಣಗೊಳಿಸದ ಪ್ರಮಾಣವನ್ನು ಪಾರದರ್ಶಕವಾಗಿ ಸರ್ಕಾರದ ನಿಯಮಗಳನ್ವಯ ಮಾರುಕಟ್ಟೆ ದರದಲ್ಲಿ ವಿಲೇವಾರಿ ಮಾಡಿದ ಬಗ್ಗೆ ಪರಿಶೀಲಿಸುವುದು.

2. ಮಾರುಕಟ್ಟೆಯಲ್ಲಿ ಬೀಜೇತರ ಉದ್ದೇಶಕ್ಕಾಗಿ ವಿಲೇವಾರಿ ಮಾಡಲಾದ ಪ್ರಮಾಣದ ವಿವರವನ್ನು ಹಾಗೂ ಮರುಮೌಲ್ಯೀಕರಣಗೊಳಿಸಿ ಪ್ರಮಾಣೀಕರಿಸಿದ ಪ್ರಮಾಣದ ವಿವರವನ್ನು ಪರಿಶೀಲಿಸುವುದು.

..3)

3. ಮುಂಗಾರು ಹಂಗಾಮು ಪ್ರತಿ ವರ್ಷವು ಆಗಸ್ಟ್-ಸೆಪ್ಟೆಂಬರ್ ಮಾಹೆಯಲ್ಲಿ ಮುಕ್ತಾಯಗೊಳ್ಳುವುದರಿಂದ ಅಕ್ಟೋಬರ್ ಮಾಹೆಯಲ್ಲಿ ಹಾಗೂ ಹಿಂಗಾರು/ಬೇಸಿಗೆ ಹಂಗಾಮು ಜನವರಿಯಲ್ಲಿ ಮುಕ್ತಾಯಗೊಳ್ಳುವುದರಿಂದ ಫೆಬ್ರವರಿ ಮಾಹೆಯಲ್ಲಿ ಜಿಲ್ಲಾವಾರು ಉಳಿಕೆಯಾಗುವ ಪ್ರಮಾಣವನ್ನು ಘೋಷಿಸುವುದು ಹಾಗೂ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಕಛೇರಿಯ ಸಹಾಯಕ ಕೃಷಿ ನಿರ್ದೇಶಕರು (ವಿಷಯ ತಜ್ಞ) ಇವರಿಂದ ದೃಢೀಕರಿಸಿ ಬೀಜೋತ್ಪಾದನಾ ಸಂಸ್ಥೆಯು ಬೀಜ ಹಾನಿ ನಿಧಿ ಕಾರ್ಯಕ್ರಮದಡಿ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಿರಬೇಕು. ಮುಂಗಾರು ಹಂಗಾಮಿನ ಪ್ರಸ್ತಾವನೆಯನ್ನು ಸದರಿ ವರ್ಷದ ನವಂಬರ್ ಮಾಹೆಯ ನಂತರ ಹಾಗೂ ಹಿಂಗಾರು/ಬೇಸಿಗೆ ಹಂಗಾಮಿನ ಪ್ರಸ್ತಾವನೆಯನ್ನು ಫೆಬ್ರವರಿ ಮಾಹೆಯ ನಂತರದಲ್ಲಿ ಸಲ್ಲಿಸಿದ ಪ್ರಸ್ತಾವನೆಗಳನ್ನು ಪರಿಗಣಿಸುವ ಬಗ್ಗೆ ಪರಿಶೀಲಿಸುವುದು.

4. ಬೀಜೇತರ ಉದ್ದೇಶಕ್ಕಾಗಿ ವಿಲೇವಾರಿ ಮಾಡಿದ ದಾಖಲಾತಿಗಳಾದ ಟೆಂಡರ್ ಪ್ರಕಟಣೆ, ವಿಲೇವಾರಿ ಸಮಿತಿಯ ನಡಾವಳಿ, ಟೆಂಡರ್‌ದಾರರು ನಮೂದಿಸಿರುವ ದರ ನಮೂನೆ. ಕರ್ನಾಟಕ ರಾಜ್ಯ ಸಾವಯವ ಮತ್ತು ಪ್ರಮಾಣನಾ ಸಂಸ್ಥೆಯಿಂದ ದೃಢೀಕೃತವಾದ ದಾಖಲಾತಿಗಳನ್ನು ಪರಿಶೀಲಿಸುವುದು.

5. ಕರ್ನಾಟಕ ರಾಜ್ಯ ಬೀಜ ನಿಗಮವು ಕೃಷಿ ವಿಶ್ವವಿದ್ಯಾನಿಲಯಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ವಿಶ್ವವಿದ್ಯಾನಿಲಯಗಳು ಉತ್ಪಾದಿಸುವ ಪ್ರಮಾಣಿತ ಬಿತ್ತನೆ ಬೀಜಗಳನ್ನು ಆದ್ಯತೆ ಮೇರೆಗೆ ರೈತ ಸಂಪರ್ಕ ಕೇಂದ್ರಗಳ ಮೂಲಕ ವಿತರಿಸುವುದನ್ನು ಹಾಗೂ ಉಳಿಕೆಯಾಗಿರುವುದನ್ನು ಪರಿಶೀಲಿಸುವುದು.

6. ಇತರೆ ಯಾವುದೇ ಯೋಜನೆಗಳಲ್ಲಿ, ಬೀಜೇತರ ಉದ್ದೇಶಕ್ಕೆ ವಿತರಣೆ ಮಾಡಿದ ಪ್ರಮಾಣಕ್ಕೆ ಆಗಿರಬಹುದಾದ ನಷ್ಟದ ಪರಿಹಾರವನ್ನು ಪಡೆದಿದ್ದಲ್ಲಿ ಮತ್ತೆ ಬೀಜ ಹಾನಿ ನಿಧಿ ಕಾರ್ಯಕ್ರಮದಡಿ ಆ ಪ್ರಮಾಣಕ್ಕೆ ಪರಿಹಾರವನ್ನು ಪಾವತಿಸುವ ಬಗ್ಗೆ ಅವಕಾಶವಿರುವುದಿಲ್ಲ.

7. ರಾಷ್ಟ್ರೀಯ ಬೀಜ ನಿಗಮವು ಸಲ್ಲಿಸುವ ಪ್ರಸ್ತಾವನೆಯೊಂದಿಗೆ ನಷ್ಟವಾಗಿರುವ ಪ್ರಮಾಣಕ್ಕೆ ಸಂಸ್ಥೆಯ ಕೇಂದ್ರ ಕಛೇರಿಯಿಂದಾಗಲೀ ಅಥವಾ ಭಾರತ ಸರ್ಕಾರದಿಂದಾಗಲೀ ಯಾವುದೇ ಪರಿಹಾರ ಪಡೆದಿಲ್ಲವೆಂದು ದೃಢೀಕೃತ ಪತ್ರವನ್ನು ಸಲ್ಲಿಸಿರುವ ಬಗ್ಗೆ ಪರಿಶೀಲಿಸುವುದು.

8. ಕನಿಷ್ಠ ಬೆಂಬಲ ಬೆಲೆ (ಕನಿಷ್ಠ ಬೆಂಬಲ ಬೆಲೆ ಇಲ್ಲದಿದ್ದಲ್ಲಿ ಮಾರುಕಟ್ಟೆ ದರ) ಹಾಗೂ ಬೀಜೋತ್ಪಾದಕ ಸಂಸ್ಥೆಗಳ ಸೇವಾ ಶುಲ್ಕ ಪರಿಗಣಿಸಿ "ಬೀಜ ಮೌಲ್ಯೀಕರಣ ಸಮಿತಿ" ಯು ಉತ್ಪಾದಿಸಲಾದ ಪ್ರಮಾಣಿತ ಬೀಜಗಳ ದರಗಳನ್ನು ಪ್ರತಿ ವರ್ಷ ನಿಗಧಿಪಡಿಸಿರುವ ಬಗ್ಗೆ ಪರಿಶೀಲಿಸುವುದು.

9. ಈ ಕಾರ್ಯಕ್ರಮವು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ರಾಜ್ಯದಲ್ಲಿ ಸ್ವತಃ ಉತ್ಪಾದಿಸುವ ಪ್ರಮಾಣಿತ ಬಿತ್ತನೆ ಬೀಜಗಳಿಗೆ ಮಾತ್ರ ಅನ್ವಯವಾಗುತ್ತದೆ. ಬೇರೆ ಮೂಲಗಳಿಂದ ಖರೀದಿಸುವ ಬಿತ್ತನೆ ಬೀಜಗಳಿಗೆ ಅನ್ವಯಿಸುವುದಿಲ್ಲದಿರುವ ಬಗ್ಗೆ ಪರಿಶೀಲಿಸುವುದು.

10. ಕೇಂದ್ರೀಯ ಬೀಜ ಸಮಿತಿಯಿಂದ ಅಧಿಸೂಚಿತ ತಳಿಗಳ ಪ್ರಮಾಣಿತ ಬಿತ್ತನೆ ಬೀಜಗಳನ್ನು ಹೊರತು ಬೇರೆ ಯಾವುದೇ ರೀತಿಯ ನಿಜಚೀಟಿ ಬಿತ್ತನೆ ಬೀಜಗಳನ್ನು ಈ ಕಾರ್ಯಕ್ರಮದಡಿ ಪರಿಗಣಿಸದಿರುವ ಬಗ್ಗೆ ಪರಿಶೀಲಿಸುವುದು.

..4)

11. ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಹಾಗೂ ಕೃಷಿ ವಿಶ್ವವಿದ್ಯಾನಿಲಯಗಳು ಬೀಜ ಹಾನಿ ನಿಧಿ ಯೋಜನೆಯಡಿ ರೈತ ಸಂಪರ್ಕ ಕೇಂದ್ರಗಳಲ್ಲಿ ವಿತರಣೆಯಾಗದೇ ಉಳಿಯುವ ಬಿತ್ತನೆ ಬೀಜ ಪ್ರಮಾಣವನ್ನು ಬೀಜೇತರ ಉದ್ದೇಶಕ್ಕೆ ವಿಲೇವಾರಿ ಮಾಡಿದ ದರ ಮತ್ತು ಬಿತ್ತನೆ ಬೀಜದ ವ್ಯತ್ಯಾಸದ ದರವನ್ನು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಪಾವತಿಸುವಂತೆ ಸಲ್ಲಿಸುವ ಪ್ರಸ್ತಾವನೆಯನ್ನು ಕೂಲಂಕುಷವಾಗಿ ನಿಯಮಾನುಸಾರ ಪರಿಶೀಲಿಸಿ ನಷ್ಟ ಭರಿಸಲು ಅರ್ಹವಾದ ಪ್ರಮಾಣ ಮತ್ತು ಮೊತ್ತವನ್ನು ತೀರ್ಮಾನಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

B S Nagarathnam

(ಬಿ.ಎಸ್. ನಾಗರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ (ಯೋಜನೆ)

ಪ್ರತಿಯನ್ನು:-

1. ಪ್ರಧಾನ ಮಹಾಲೇಖಪಾಲರು, (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್‌ಭವನ", ಅಂಚೆ ಪೆಟ್ಟಿಗೆ ಸಂ: 5398, ಬೆಂಗಳೂರು-01.
2. ಪ್ರಧಾನ ಮಹಾಲೇಖಪಾಲರು, (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂ: 5398, ಬೆಂಗಳೂರು-01.
3. ಮಹಾಲೇಖಪಾಲರು (ಎ ಮತ್ತು ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂ: 5329, ಬೆಂಗಳೂರು-01.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಬೆಂಗಳೂರು
6. ಮಾನ್ಯ ಕೃಷಿ ಸಚಿವರವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು
7. ಆಯುಕ್ತರು / ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
8. ಅಪರ ಕೃಷಿ ನಿರ್ದೇಶಕರು (ಸಾವಯವ ಕೃಷಿ) ಕೃಷಿ ಆಯುಕ್ತರ ಕಾರ್ಯಾಲಯ, ಬೆಂಗಳೂರು
9. ನಿರ್ದೇಶಕರು, ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣನ ಸಂಸ್ಥೆ, ಬೆಂಗಳೂರು
10. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಬೀಜ ನಿಗಮ, ಬೆಂಗಳೂರು
11. ವ್ಯವಸ್ಥಾಪಕ ನಿರ್ದೇಶಕರು, ರಾಷ್ಟ್ರೀಯ ಬೀಜ ನಿಗಮ, ಬೆಂಗಳೂರು
12. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಹಕಾರಿ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳಿ ನಿಯಮಿತ, ಬೆಂಗಳೂರು
13. ವಿಶೇಷಾಧಿಕಾರಿಗಳು (ಬೀಜ) ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು/ಧಾರವಾಡ/ರಾಯಚೂರು

..5)

14. ವಿಶೇಷಾಧಿಕಾರಿಗಳು (ಬೀಜ) ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯ, ಶಿವಮೊಗ್ಗ
15. ಮುಖ್ಯ ಲೆಕ್ಕಾಧಿಕಾರಿಗಳು, ಕೃಷಿ ಆಯುಕ್ತರ ಕಾರ್ಯಾಲಯ, ಬೆಂಗಳೂರು
16. ಜಂಟಿ ಕೃಷಿ ನಿರ್ದೇಶಕರು (ಬೀಜಾಭಿವೃದ್ಧಿ ಮತ್ತು ರಾಜ್ಯ ಕ್ಷೇತ್ರ) ಕೃಷಿ ಆಯುಕ್ತರ ಕಾರ್ಯಾಲಯ, ಬೆಂಗಳೂರು
17. ಜಂಟಿ ನಿರ್ದೇಶಕರು, ಹುಜೂರು ಖಜಾನೆ, ಬೆಂಗಳೂರು
18. ಸರ್ಕಾರದ ಉಪ ಕಾರ್ಯದರ್ಶಿ-1, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
19. ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು
20. ಸರ್ಕಾರದ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬೆಂಗಳೂರು
21. ಸರ್ಕಾರದ ಉಪ ಕಾರ್ಯದರ್ಶಿಗಳು- 1 & 2, ಕೃಷಿ ಇಲಾಖೆ, ಇವರ ಆಪ್ತ ಶಾಖೆ.
22. ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಕೇಂದ್ರ, ಬೆಂಗಳೂರು.
23. ಶಾಖಾ ರಕ್ಷ ಕಡತ / ಹೆಚ್ಚುವರಿ ಪ್ರತಿಗಳು.

(ಕ್ರಮ ಸಂಖ್ಯೆ: 8 ರಿಂದ 16ರ ವರೆಗೆ ಕೃಷಿ ಆಯುಕ್ತರವರ ಮೂಲಕ)